# ಅಳಿಲಿಗೆ ಅಳಿಲು ಸೇವೆ

ಬಳ್ಳಾರಿಯಲ್ಲಿ ಸೇರಿದಂತೆ ರಾಜ್ಯದೆಲ್ಲೆಡೆ ಬಿಸಿಲಿನ ಧಗೆ ದಿನದಿಂದ ದಿನಕ್ಕೆ ಏರುಗತಿಯಲ್ಲಿದೆ. ದಾಹ ತಣಿಸಲು ಮನುಷ್ಯರೇ ಪರದಾಡುತ್ತಿರುವ ಇಂತಹ ಸಂದರ್ಭದಲ್ಲಿ, ಪ್ರಾಣಿ ಪಕ್ಷಿಗಳ ಪರಿಸ್ಥಿತಿ ಹೇಳತೀರದು. ಈಚೆಗೆ, ದಾವಣಗೆರೆಗೆ ಹೋಗಲೆಂದು ಬಳ್ಳಾರಿಯ ಕಂಟೋನ್ಮೆಂಟ್ ರೈಲು ನಿಲ್ದಾಣಕ್ಕೆ ತುಸು ಮುಂಚೆಯೇ ತಲುಪಿದ್ದೆ. ರೈಲು ಬರಲು ಇನ್ನೂ ಸಮಯ ಇದ್ದುದ್ದರಿಂದ ಪ್ಲಾಟ್‌ಫಾರಂನಲ್ಲಿ ಓಡಾಡುತ್ತಾ ಅಲ್ಲಿರುವ ಸಾಲು ಮರಗಳನ್ನು ಸುತ್ತಿದೆ.

ಯಾರೋ ಹೃದಯವಂತರೊಬ್ಬರು, ಪ್ಲಾಸ್ಟಿಕ್ ಬಾಟಲ್ ಕತ್ತರಿಸಿ, ಅದಕ್ಕೆ ನೀರು ತುಂಬಿ ಅಲ್ಲಿದ್ದ ಮರಗಳಿಗೆ ತೂಗು ಹಾಕಿದ್ದರು. ಹಾಗೆಯೇ, ಅಲ್ಲಲ್ಲಿ ಮರದ ಹತ್ತಿರದ ಕಾಂಪೌಂಡ್ ಮೇಲೆ ಹಿಡಿ ಅನ್ನ ಹಾಕಿದ್ದರು. ಅದನ್ನು ನೋಡುತ್ತಿದ್ದಂತೆ ಅಳಿಲೊಂದು ಆಹಾರ ಸವಿಯಲು ಬಂದೇ ಬಿಟ್ಟಿತು. ಹಾಗೆಯೇ, ಮತ್ತೊಂದು ಅಳಿಲು ನೇತುಹಾಕಿದ್ದ ಪ್ಲಾಸ್ಟಿಕ್ ಬಾಟಲತ್ತ ಇಳಿದು ನೀರು ಕುಡಿಯಿತು. ಆ ಕ್ಷಣಗಳನ್ನು ನನ್ನ ಕ್ಯಾಮೆರಾದಲ್ಲಿ ಬಂಧಿಸಿದೆ. ಬೇಸಿಗೆ ಬಂದಿದೆ. ನೀರು ಹಾಗೂ ಆಹಾರಕ್ಕಾಗಿ ಪ್ರಾಣಿ ಪಕ್ಷಿಗಳು ಪರದಾಡುತ್ತವೆ. ಸಾಧ್ಯವಾದಷ್ಟರ ಮಟ್ಟಿಗೆ ಅವುಗಳಿಗೆ ನೀರು ಹಾಗೂ ಆಹಾರ ಒದಗಿಸುವುದನ್ನು ಕಾಯಕದಂತೆ ಎಲ್ಲರೂ ಮಾಡಬೇಕಿದೆ.

–ರಘುನಾಥ ರಾವ್ ತಾಪ್ಸೆ, ದಾವಣಗೆರೆ









# ಇದು ಆನೇನಾ? ಗೂಳಿನಾ?

ಚಿತ್ರದಲ್ಲಿ ಕಾಣುತ್ತಿರುವುದು ಆನೆಯೋ? ಗೂಳಿಯೋ? ಈ ಚಿತ್ರ ಕಂಡಿದ್ದು ತಮಿಳುನಾಡಿನ ದಾರಶೂರಂನ ಐರಾವತೇಶ್ವರ ದೇವಾಲಯದಲ್ಲಿ. ಈ ದಾರಶೂರಂ ಕುಂಭಕೋಣಂನಿಂದ ಕೇವಲ ಐದು ಕಿ.ಮೀ. ಅಂತರದಲ್ಲಿದೆ. ವಿಶ್ವಪಾರಂಪರಿಕ ತಾಣವಾಗಿರುವ ಈ ದೇವಾಲಯ ಚೌಕಾಕಾರವಾಗಿದ್ದು, ರಥದ ಮಾದರಿಯಲ್ಲಿ ನಿರ್ಮಾಣಗೊಂಡಿದೆ. ಆನೆಗಳು ದೇವಸ್ಥಾನವನ್ನು ಎಳೆಯುತ್ತಿರುವಂತೆ ಶಿಲ್ಪಗಳನ್ನು ಕೆತ್ತಲಾಗಿದೆ.

ಒಂದು ಕಡೆಯಿಂದ ಆನೆಯಂತೆ, ಮತ್ತೊಂದು ಕಡೆಯಿಂದ ಗೂಳಿಯಂತೆ ಕಾಣುವ ಈ ಶಿಲ್ಪಕಲೆಯ ಹಿಂದಿರುವ ಕಲಾವಿದರ ಕೈಚಳಕಕ್ಕೆ ಬೆರಗಾಗಲೇಬೇಕು. ತಂಜಾವೂರಿನ ಬೃಹದೇಶ್ವರ ದೇವಾಲಯದ ಶಿಲ್ಪಕಲೆಗಿಂತ ಐರಾವತೇಶ್ವರ ದೇವಾಲಯದ ಶಿಲ್ಪಕಲೆ ವಾಸ್ತುಶಿಲ್ಪದ ದೃಷ್ಟಿಯಿಂದ ಅತ್ಯಂತ ಸುಂದರವಾಗಿದೆ. ಪ್ರಶಾಂತವಾದ ವಾತಾವರಣವುಳ್ಳ ಈ ದೇವಾಲಯದ ಸೊಬಗನ್ನು ಕಣ್ತುಂಬಿಕೊಳ್ಳುವುದೇ ಒಂದು ಸೌಭಾಗ್ಯ. ಪ್ರಚಾರ ಸಿಗದ ಕಾರಣಕ್ಕೆ ಈ ದೇಗುಲ ಇನ್ನೂ ಅಜ್ಞಾತವಾಗಿಯೇ ಉಳಿದಿದೆ.

–ಶಶಿರೇಖಾ ನಾಗೇಂದ್ರ, ತುಮಕೂರು

